# ಸಭಾಪತಿ ಹೊರಟ್ಟಿ, ಸಭಾಧ್ಯಕ್ಷ ಖಾದರ್‌ರಿಗೆ ಲಂಡನ್ನಿನ ಬಸವ ಬಳಗದಿಂದ ಸನ್ಮಾನ



**ಗದಗ ಸಂಜೆ ವಾರ್ತೆ :** ಲಂಡನ್.. ವಿಶ್ವಗುರು ಜ್ಞಾನಜ್ಯೋತಿ ಬಸವಣ್ಣನವರ ಚಿಂತನೆಗಳು ಸಂದೇಶಗಳು ಸಮ ಸಮಾಜದ ಅಭಿವೃದ್ಧಿಗೆ ಸರ್ವಕಾಲಿಕ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಲಂಡನ್ನಿನ ಬಸವ ಬಳಗದ ವತಿಯಿಂದ ಥೇಮ್ಸ್ ನದಿಯ ತಟದಲ್ಲಿ ನಿರ್ಮಿಸಿದ ಬಸವಣ್ಣನವರ ಪ್ರತಿಮೆ ಸ್ಥಳದ ಆವರಣದಲ್ಲಿ ನೀಡಿದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿ ಬಸವಣ್ಣನವರ 12ನೇ ಶತಮಾನದ ಅನುಭವ ಮಂಟಪದ ಕಲ್ಪನೆ ಇಂದು ಇಡೀ ಜಗತ್ತು ಒಪ್ಪಿದೆ ಅಂದೆ ಸಮ ಸಮಾಜದ ಕನಸನ್ನು ಕಂಡ ಬಸವಣ್ಣನವರ ಚಿಂತನೆಗಳು ಇಂದು ಎಲ್ಲ ವರ್ಗದ ಹಿತಕ್ಕಾಗಿ ಅವರ ಸಂದೇಶಗಳು ಉಪಯುಕ್ತವಾಗಿವೆ.

ಸಮೃದ್ಧ ಸಮಾಜ ಕಟ್ಟಲು ಕಾಯಕವೊಂದೇ ದಿವ್ಯ ಔಷಧಿ ಹೀಗಾಗಿ ಕಾಯಕದಿಂದಲೇ ಕೈಲಾಸ ದಂತಹ ವಾತಾವರಣವನ್ನು ನಿರ್ಮಾಣ ಮಾಡಿಕೊಳ್ಳಬಹುದು ಅಂತ ಕಲ್ಪನೆಯನ್ನು ಕಟ್ಟಿಕೊಟ್ಟ ಬಸವಣ್ಣನವರು ಎಲ್ಲರಿಗೂ ಎಲ್ಲ ಕಾಲಕ್ಕೂ ಆದರ್ಶಪ್ರಾಯರು. ಹೀಗಾಗಿ ಅವರ ಚಿಂತನೆಗಳನ್ನು ಇಡೀ ಜಗತ್ತೇ ಒಪ್ಪಿಕೊಂಡಿದೆ. ಲಂಡನ್ನಿನಲ್ಲಿ ನೆಲೆಸಿರುವ ಕನ್ನಡಿಗರು ಕನ್ನಡದ ನೆಲ ಜಲ ಭಾಷೆ ಪ್ರೀತಿಯ ಬಗ್ಗೆ ಇಟ್ಟುಕೊಂಡಿರುವ ಅವರ ಕಾಳಜಿಯನ್ನ ಅಭಿನಂದಿಸುವೆ ಎಂದು ಹೊರಟ್ಟಿಯವರು ಹೇಳಿದರು. ನಮ್ಮಣ್ಣ ಗೌರವಿಸಿದ ಇಲ್ಲಿನ ಎಲ್ಲ ಕನ್ನಡಿಗರನ್ನ ಹೃದಯತುಂಬಿ ಅಭಿನಂದಿಸುವುದಾಗಿಂತಿಊ ಹೇಳಿದರು.

ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಇಡೀ ಜಗತ್ತಿನ ತುಂಬೆಲ್ಲ ಕನ್ನಡಿಗರು ತಮ್ಮದೇ ಆದ ಸಾಧನೆ ಮೂಲಕ ಕನ್ನಡ ನಾಡಿನ ಗೌರವವನ್ನು ಹೆಚ್ಚಿಸಿದ್ದಾರೆ ಅದೇ ರೀತಿ ಲಂಡನ್ನಿನ ಕನ್ನಡಿಗರು ಸಹ ಲಂಡನಿನಲ್ಲಿ ಕನ್ನಡದ ಕಂಪನ್ನ ಬಿತ್ತರಿಸಿದ್ದಾರೆ. ಅಲ್ಲದೆ ಇಂಗ್ಲೆಂಡಿನ ಪ್ರಧಾನ ಮಂತ್ರಿಗಳಾದ ಋಷಿ ಸುನಾಕ್ ಅವರು ಕರ್ನಾಟಕದ ಅಳಿಯನಾಗಿದ್ದು ನಮಗೆಲ್ಲ ಹೆಮ್ಮೆಯ ಸಂಗತಿ ಹೀಗಾಗಿ ಅವರನ್ನ ಅಭಿನಂದಿಸುವುದಾಗಿ ಹೇಳಿದರು.

ಲಂಡನ್ನಿನ ಬಸವ ಬಳಗದ ವತಿಯಿಂದ ಕನ್ನಡಿಗರಾದ ಲಂಡನ್ನಿನ ಮಾಜಿ ಮೇಯರ್ ಹಾಗೂ ಬಸವ ಪ್ರತಿಮೆ ಪ್ರತಿಷ್ಠಾಪನೆಯ ರೂವಾರಿ ಡಾ .ನಿರಜ್ ಪಾಟೀಲ್ ಸ್ವಾಗತಿಸಿ ಮಾತನಾಡಿದ ಅವರು ನಾವು ಕನ್ನಡಿಗರು ಎಂದು ಎನಿಸಿಕೊಳ್ಳಲು ಹೆಮ್ಮೆ ಎನಿಸುತ್ತದೆ. ನಾವು ಎಲ್ಲೇ ಇದ್ದರೂ ನಮ್ಮ ನೆಲ ಜಲ ಭಾಷೆ ನಮ್ಮ ಪೂರ್ವಿಕರನ್ನ ನಿತ್ಯ ಸ್ಮರಿಸಿಕೊಂಡೆ ನಮ್ಮ ದೈನಂದಿನ ಕೆಲಸಗಳನ್ನು ಇಲ್ಲಿ ಮಾಡುತ್ತಿದ್ದೇವೆ ನಮ್ಮ ದೇಹ ಇಲ್ಲಿದ್ದರೂ ನಮ್ಮ ಮನಸೆಲ್ಲಾ ಕನ್ನಡದ ನೆಲದಲ್ಲಿಯೇ ಹರಿದಾಡುತ್ತಿದೆ. ಐತಿಹಾಸಿಕ ದಾಖಲೆ ಮಾಡಿದ ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ವಿಧಾನಸಭಾಧ್ಯಕ್ಷರಾದ ಯು.ಟಿ .ಖಾದರ್ ಅವರನ್ನು ಲಂಡನ್ನಿನ ಬಸವ ಬಳಗದ ವತಿಯಿಂದ ಸ್ವಾಗತಿಸಲು ಹಾಗೂ ಗೌರವ ಸನ್ಮಾನ ನೀಡಲು ನಮಗೆಲ್ಲ ಖುಷಿಯ ಸಂಗತಿ ಹೀಗಾಗಿ ಇಂದು ನಾವೆಲ್ಲ ಕರ್ನಾಟಕದಲ್ಲಿಯೇ ಇದ್ದೇವೆ ಎಂಬ ಭಾವನೆ ನಮಗೆಲ್ಲ ಮೂಡಿದೆ ಹೀಗಾಗಿ ಇಂದಿನ ದಿನ ನಮಗೆಲ್ಲಾ ಎಂದು ಮರೆಯದ ಸಂತಸದ ದಿನ ಎಂದು ಡಾ ನೀರಜ್ ಪಾಟೀಲ್ ಹೇಳಿದರು.

ಈ ಸಂದರ್ಭದಲ್ಲಿ ಲಂಡನ್ನಿನ ಬಸವ ಬಳಗದ ಸದಸ್ಯರು ಕನ್ನಡ ಅಭಿಮಾನಿಗಳು ಹಿರಿಯ ಅಧಿಕಾರಿ ವೃಂದ ಉಪಸ್ಥಿತರಿದ್ದರು.

# ಲಂಡನ್ ಬಸವ ಬಳಗದಿಂದ ಹೊರಟ್ಟಿಗೆ ಸನ್ಮಾನ

**ಹುಬ್ಬಳ್ಳಿ:** ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಚಿಂತನೆಗಳು, ಸಂದೇಶಗಳು ಸಮ ಸಮಾಜದ ಅಭಿವೃದ್ಧಿಗೆ ಸರ್ವಕಾಲಿಕ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಲಂಡನ್‌ನ ಬಸವ ಬಳಗದ ವತಿಯಿಂದ ಥೇಮ್ಸ್ ನದಿಯ ತಟದಲ್ಲಿ ನಿರ್ಮಿಸಿದ ಬಸವಣ್ಣನವರ ಪ್ರತಿಮೆ ಸ್ಥಳದ ಆವರಣದಲ್ಲಿ ನೀಡಿದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದರು.



ಬಸವಣ್ಣನವರ 12ನೇ ಶತಮಾನದ ಅನುಭವ ಮಂಟಪದ ಪರಿಕಲ್ಪನೆ ಇಂದು ಇಡೀ ಜಗತ್ತು ಒಪ್ಪಿ ಪಾಲಿಸುತ್ತಿದೆ. ಅಂದೆ ಸಮ ಸಮಾಜದ ಕನಸನ್ನು ಕಂಡ ಬಸವಣ್ಣನವರ ಚಿಂತನೆಗಳು ಇಂದು ಎಲ್ಲ ವರ್ಗದ ಹಿತಕ್ಕಾಗಿ ಉಪಯುಕ್ತವಾಗಿವೆ ಎಂದರು.

ಸಮೃದ್ಧ ಸಮಾಜ ಕಟ್ಟಲು ಕಾಯಕವೊಂದೇ ದಿವ್ಯ ಔಷಧಿ. ಹೀಗಾಗಿ ಕಾಯಕದಿಂದಲೇ ಕೈಲಾಸದಂತಹ ವಾತಾವರಣವನ್ನು ನಿರ್ಮಾಣ ಮಾಡಿಕೊಳ್ಳಬಹುದು ಅಂತ ಕಲ್ಪನೆಯನ್ನು ಕಟ್ಟಿಕೊಟ್ಟ ಬಸವಣ್ಣನವರು ಎಲ್ಲರಿಗೂ ಎಲ್ಲ ಕಾಲಕ್ಕೂ ಆದರ್ಶಪ್ರಾಯರು ಎಂದರು.

ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಇಡೀ ಜಗತ್ತಿನ ತುಂಬೆಲ್ಲ ಕನ್ನಡಿಗರು ತಮ್ಮದೇ ಆದ ಸಾಧನೆ ಮೂಲಕ ಕನ್ನಡ ನಾಡಿನ ಗೌರವವನ್ನು ಹೆಚ್ಚಿಸಿದ್ದಾರೆ.

ಅದೇ ರೀತಿ ಲಂಡನ್‌ನ ಕನ್ನಡಿಗರು ಸಹ ಲಂಡನ್‌ನಲ್ಲಿ ಕನ್ನಡದ ಕಂಪು ಬಿತ್ತರಿಸಿದ್ದಾರೆ. ಅಲ್ಲದೆ ಇಂಗ್ಲೆಂಡಿನ ಪ್ರಧಾನ ಮಂತ್ರಿ ರಿಷಿ ಸುನಕ್ ಅವರು ಕರ್ನಾಟಕದ ಅಳಿಯನಾಗಿದ್ದು, ನಮಗೆಲ್ಲ ಹೆಮ್ಮೆಯ ಸಂಗತಿ. ಹೀಗಾಗಿ ಅವರನ್ನ ಅಭಿನಂದಿಸುವುದಾಗಿ ಇದೇ ಸಂದರ್ಭದಲ್ಲಿ ಹೇಳಿದರು.

ಕನ್ನಡಿಗರಾದ ಡಾ.ನಿರಜ್ ಪಾಟೀಲ್, ಲಂಡನ್‌ನ ಬಸವ ಬಳಗದ ಸದಸ್ಯರು, ಕನ್ನಡ ಅಭಿಮಾನಿಗಳು, ಹಿರಿಯ ಅಧಿಕಾರಿ ವೃಂದ ಉಪಸ್ಥಿತರಿದ್ದರು.